ಸಾಹಿತ್ಯಕ ಅಳ್ಳಕತನ 'ಪ್ರಬುದ್ಧ ಕರ್ನಾಟಕ' ಪತ್ರಿಕೆ ಹುಟ್ಟಿದ 1919ರಲ್ಲೂ ಇತ್ತು; ಅಂಥದ್ದೊಂದು ಪತ್ರಿಕೆ ರೂಪುಗೊಳ್ಳಲು ಅದೇ ಕಾರಣವೂ ಆಯ್ತು. ಆಗ ಸಣ್ಣದಾಗಿದ್ದದ್ದು ಈಗ ಬೃಹದಾಕಾರ ತಳೆದಿದೆ.

ಒಂದು ಕಾಲಕ್ಕೆ ಈ ಬೃಹತ್ ಗಾತ್ರದ ಸಮ್ಮೇಳನಗಳಿಗೆ ಪರ್ಯಾಯವಾಗಿ ಸಣ್ಣ ಪ್ರಮಾಣದ ಸಮ್ಮೇಳನಗಳು ಒಳ್ಳೆಯದೆಂದು ಅನ್ನಿಸಿತ್ತು. ಜಿಲ್ಲೆ, ತಾಲ್ಲೂಕು, ಹೋಬಳಿ, ವಾರ್ಡ್ ಮಟ್ಟಗಳ ಸಮ್ಮೇಳನಗಳು ಈಗ ಯಾಂತ್ರಿಕವಾಗಿ ದುಡ್ಡು ಖರ್ಚು ಮಾಡಲು ಮಾತ್ರ ಜರುಗುತ್ತಿವೆ. ಸಿನಿಮಾ ನಿರ್ಮಾಪಕ ಸಾ.ರಾ. ಗೋವಿಂದು ತರಹದವರು ಒಂದು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುತ್ತಾರೆ. ನುಡಿಸಿರಿ, ಜನ ನುಡಿ, ಸಂಭ್ರಮಗಳು ಈಗ ಪರ್ಯಾಯವಾಗಿ ರೂಪುಗೊಂಡಿವೆ. ಸಾಹಿತ್ಯದ ಹೊರಗಿನ ಉದ್ದೇಶದಿಂದ ನಡೆಯುವಂಥವು ನನ್ನ ಮಟ್ಟಿಗೆ ಸಾಮಾಜಿಕ ಅಥವಾ ರಾಜಕೀಯ ಸಮ್ಮೇಳನಗಳು.

ಇನ್ನು ನಮ್ಮ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಿಗೂ ಬಹುಪಾಲು ಸರ್ಕಾರಿ ನೆರವಿನೊಂದಿಗೆ ನಡೆಯುತ್ತಿರುವುದು ವಾಸ್ತವ. ವರ್ಷದಿಂದ ವರ್ಷಕ್ಕೆ ಸಮ್ಮೇಳನದ ಬಾಬತ್ತಿನ ಕೋಟಿಗಳು ಏರುತ್ತಲೇ ಇದೆ. ಯಾವ ಸಮ್ಮೇಳನದ ಬಳಿಕವೂ ಸಾರ್ವಜನಿಕವಾಗಿ ಅದರ ಖರ್ಚುವೆಚ್ಚಗಳನ್ನು ಪರಿಷತ್ತು ಪ್ರಕಟಿಸಿದ ನೆನಪಿಲ್ಲ.

ಹುಬ್ಬಳ್ಳಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯನ್ನು ವಿರೋಧಿಸಿ 1991ರಲ್ಲಿ ನಡೆದ, ಜಾಗೃತ ಸಾಹಿತ್ಯ ಸಮ್ಮೇಳನ ವಿಶಿಷ್ಟ. ಗೋಪಾಲಕೃಷ್ಣ ಅಡಿಗ, ಲಂಕೇಶ್, ಶಾಂತಿನಾಥ ದೇಸಾಯಿ, ಕೆ.ವಿ. ಸುಬ್ಬಣ್ಣ ಮೊದಲಾದ ಲೇಖಕರ ಸಂಖ್ಯೆ, ಅಲ್ಲಿ ಮಂಡಿಸಿದ ವಿಚಾರ, ಸಂವಾದಗಳು, ಸಮ್ಮೇಳನದ ಪರ್ಯಾಯ ಮಾದರಿ ಎಂದು ಹೇಳಬಹುದು. ಆ ಕಾಲದ ಎಲ್ಲ ದೊಡ್ಡ ಲೇಖಕರು ಅದರಲ್ಲಿ ಪಾಲ್ಗೊಂಡಿದ್ದರು. ಯಾವ ಲಾಬಿಗಳು, ಸರ್ಕಾರೀ ಬಡಿವಾರಗಳು ಅಲ್ಲಿರಲಿಲ್ಲ.

ಸಮ್ಮೇಳದಿಂದ ಭಾಷೆ, ಸಾಹಿತ್ಯದ ಬೆಳವಣಿಗೆ ಸಾಧ್ಯ ಅಂತ ನಂಬುವುದು ದೂರದ ಮಾತು. ಆದರೆ, ಪುಸ್ತಕಗಳ ಮಾರಾಟದ ದೃಷ್ಟಿಯಿಂದ, ಸಣ್ಣ ಪತ್ರಿಕೆಗಳ ಚಂದಾ ಸಂಗ್ರಹ ದೃಷ್ಟಿಯಿಂದ ಹಳೆಯ ಅಕ್ಷರ ಗೆಳೆಯರ ಭೇಟಿಯ ದೃಷ್ಟಿಯಿಂದ ಸಮ್ಮೇಳನಗಳು ಯಶಸ್ವಿ. ಈಗೀಗ ಪುಸ್ತಕ ಮಾರಾಟದ ವ್ಯವಸ್ಥೆಯೂ ಅಚ್ಚುಕಟ್ಟಾಗಿ ನಡೆಯುತ್ತಿದೆ. ಸಾಹಿತ್ಯ ಕುರಿತಾಗಿ ಸಮ್ಮೇಳನಗಳಿಂದ ಜನರ ದೃಷ್ಟಿಯಲ್ಲಿ ಯಾವ ಬದಲಾವಣೆಯೂ ಆದ ಹಾಗಿಲ್ಲ. ಯಾವುದೋ ಜಾತ್ರೆ, ಮೇಳಗಳಂತೆ ಇದೂ ಜರುಗುತ್ತದೆ. ಜನ ತಮಗೆ ಬೇಕಾದ್ದು ಕೊಂಡು ಖುಷಿಪಡುತ್ತಾರೆ. ಕರ್ನಾಟಕದಾದ್ಯಂತ ನಡೆವ ಜಾತ್ರೆ, ಮೇಳಗಳಿಗೆ ಲಕ್ಷಾಂತರ ಜನ ಸೇರುತ್ತಾರೆ. ಅಲ್ಲಿ ಧಾರ್ಮಿಕ ನಂಬಿಕೆ ದೊಡ್ಡದು. ಹೀಗೆ ಸರ್ಕಾರಿ ಹಣದ ಪ್ರಾಯೋಜನೆ, ಉಚಿತ ಊಟ, ಪ್ರತಿನಿಧಿತ್ವ... ಇಂಥ ವಿಷಯಗಳು ಇರುವುದಿಲ್ಲ ಅಷ್ಟೆ.

ಪರಿಷತ್ತಿನ ಪ್ರಸ್ತುತತೆ ಉಳಿದಿರುವುದೇ ಸಮ್ಮೇಳನಗಳಿಂದ. ಯಾವುದೇ ಹೊಸ ರೀತಿಯಲ್ಲಿ ಭಾಷೆಗೆ ಕಸುವು ತುಂಬುವ ಕೆಲಸ ಅದರಿಂದ ಈಚಿನ ವರ್ಷಗಳಲ್ಲಿ ಆಗಿಲ್ಲ. ಅದರ ಪರಂಪರೆಯೇ ಅದಕ್ಕೊಂದು ಹೊರಲಾರದ ಭಾರವಾದಂತೆ ಭಾಸವಾಗುತ್ತಿದೆ. ರಾಶಿ ರಾಶಿ ಮುದ್ರಿತ ಪುಸ್ತಕಗಳನ್ನು ಅರ್ಧ ಬೆಲೆಗೆ ಮಾರುವುದರಿಂದ ಮುದ್ರಕರ, ಮಧ್ಯವರ್ತಿಗಳ ಜೇಬು ಭಾರವಾದೀತೇ ಹೊರತು, ಕನ್ನಡ ಸಾಹಿತ್ಯ ಎಂಬ ಜೀವಂತ ಸೆಲೆಗೆ ಯಾವ ಪ್ರಯೋಜನವೂ ಆಗದು.

---

'ಸಂಚಯ' ಸಾಹಿತ್ಯ ಪತ್ರಿಕೆಯನ್ನು ದಶಕಗಳ ಕಾಲ ಸಂಪಾದಿಸಿ ಪ್ರಕಟಿಸಿದ್ದಾರೆ. ಕವಿ, ವಿಮರ್ಶಕ. 'ಡ್ರೀಮರ್', 'ನಾಳೆಯಿಂದ' ಅವರ ಕವನ ಸಂಗ್ರಹಗಳು. ಹಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ.